# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಕವಿಪ್ರನಿನಿ ಮತ್ತು ವಿಸಕಂಗಳ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ

ಸಂಖ್ಯೆ: ಕೆಇಎನ್‌ಡಿಸಿಪಿಎಸ್‌ಸಿ/ಬಿ93/35901/2016-17/ Cys-7

ಕಾವೇರಿ ಭವನ,
ಬೆಂಗಳೂರು-560009.
ದಿನಾಂಕ: 30 AUG 2016

ಗೆ,

ವ್ಯವಸ್ಥಾಪಕ ನಿರ್ದೇಶಕರು,
ಬೆ.ವಿ.ಕಂ, ನಿಗಮ ಕಾರ್ಯಾಲಯ,
ಕೆ.ಆರ್.ವೃತ್ತ, ಬೆಂಗಳೂರು.

ಮಾನ್ಯರೇ

ವಿಷಯ: ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಪಿಂಚಣಿ ವಂತಿಗೆಯನ್ನು ಕೆಇಎನ್‌ಡಿಸಿಪಿಎಸ್ ಘಟಕಕ್ಕೆ RTGS ಮೂಲಕ ವರ್ಗಾಯಿಸುವ ಬಗ್ಗೆ.

ಉಲ್ಲೇಖ: 1. ನಿಗಮ ಕಾರ್ಯಾಲಯದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/4977/2005-06 ದಿನಾಂಕ: 21.08.2007.
2. ಸಭೆಯ ನಡವಳಿ ಸಂಖ್ಯೆ: ಕವಿಪ್ರನಿನಿ/ಕೆಇಎನ್‌ಡಿಸಿಪಿಎಸ್/ಬಿ93/35991/2016-17/ಸಿವೈಎಸ್-04 ದಿನಾಂಕ: 28.07.2016
3. ಬೆವಿಕಂ ಪತ್ರ ಸಂಖ್ಯೆ:ಮು.ಪ್ರ.ವ್ಯ(ಹ ಮತ್ತು ವಾ)/ಪಿಂ/ಬಿಸಿ-3/16-17/ಸಿವೈಎಸ್-32 ದಿ:23.08.2016.

* * * * * * *

1. ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ನೇಮಕಾತಿ ಹೊಂದಿದ ಅಧಿಕಾರಿ/ನೌಕರರ ಮತ್ತು ಕಂಪನಿಯ ಪ್ರತಿ ತಿಂಗಳ ಕ್ರೋಢೀಕೃತ ಪಿಂಚಣಿ ವಂತಿಗೆಯನ್ನು ಅದರ ಮುಂದಿನ ತಿಂಗಳ 5ನೇ ತಾರೀಖಿನೊಳಗಾಗಿ ಪಾವತಿಸುವಂತೆ ವಿಸಕಂಗಳಿಗೆ ಕೋರಲಾಗಿರುತ್ತದೆ. ಆದರೆ ಮಾಸಿಕ ಪಿಂಚಣಿ ವಂತಿಗೆಯನ್ನು ವಿಳಂಬವಾಗಿ ಕೆಲವು ವಿಸಕಂಗಳು ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಪಾವತಿಸುತ್ತಿರುವುದರಿಂದ ಪಿಂಚಣಿ ವಂತಿಗೆ ಹೂಡಿಕೆಗಳಲ್ಲಿ ಗಳಿಸಬಹುದಾದ ಆದಾಯ (ಬಡ್ಡಿ) ಮೊತ್ತವು ಕುಂಠಿತವಾಗುತ್ತಿರುವ ಹಿನ್ನಲೆಯಲ್ಲಿ ಉಲ್ಲೇಖ (2) ರ ಪತ್ರದಲ್ಲಿ ಕ್ರೂಡಿಕೃತ ಪಿಂಚಣಿ ವಂತಿಗೆಯನ್ನು ವಿಳಂಬವಿಲ್ಲದೆ ಪಾವತಿಸುವಂತೆ ಸೂಚಿಸಲಾಗಿತ್ತು.

2. ಉಲ್ಲೇಖ (3) ರ ಪತ್ರದಲ್ಲಿ ಬೆವಿಕಂನ ಎಲ್ಲಾ ಲೆಕ್ಕಘಟಕಗಳು ಆಗಸ್ಟ್-2016 ರ ವೇತನದಿಂದ ಮುಂದಕ್ಕೆ ಮುರಿಕೆ ಮಾಡುವ ಉದ್ಯೋಗಸ್ಥ/ಉದ್ಯೋಗದಾತ ವಂತಿಗೆ (Employee/Employer Contribution) ಅನ್ನು ವೇತನ ನೀಡುವ ದಿನದಂದೇ ಸಂಬಂದಪಟ್ಟ ವೇತನ ಬಟವಾಡೆದಾರರು ಚಾಚೂ ತಪ್ಪದೇ RTGS ಮೂಲಕ ಕೆಇಎನ್‌ಡಿಸಿಪಿಎಸ್ ಘಟಕದ ಬ್ಯಾಂಕ್ ಖಾತೆಗೆ ನೇರವಾಗಿ ಕಳುಹಿಸುವಂತೆ ತಿಳಿಸಲಾಗಿರುತ್ತದೆ.

3. ಕಂಡಿಕೆ (2) ರ ಬಗ್ಗೆ ಬೆವಿಕಂನ ಲೆಕ್ಕಘಟಕಗಳು ನೇರವಾಗಿ ಬೆವಿಕಂ ನಿಗಮ ಕಛೇರಿಗೆ ಕಳುಹಿಸಲು ಹಾಗೂ ಬೆವಿಕಂ ನಿಗಮ ಕಛೇರಿ ವೇತನ ಬಟವಾಡೆ ದಿನ/ತರುವಾಯ ದಿನ ಕವಿಪ್ರನಿನಿಯ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ RTGS ಮೂಲಕ ಪಾವತಿಸಲು ಕೋರಲಾಗಿದೆ.

4. ಕಂಡಿಕೆ (3) ರ ಬಗ್ಗೆ ಬೆವಿಕಂ ನಿಗಮ ಕಾರ್ಯಾಲಯವು ಎಲ್ಲಾ ಲೆಕ್ಕಘಟಕಗಳಿಗೂ ತಿಳಿಸುವುದು.

ತಮ್ಮ ವಿಶ್ವಾಸಿ,

ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ

ಪ್ರತಿ:

1. ಎಲ್ಲಾ ಮುಖ್ಯ ಇಂಜಿನೀಯರ್(ವಿ), ಬೆವಿಕಂ ರವರಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು (ಹ&ವಾ), ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಕೆ.ಆರ್.ವೃತ್ತ, ಬೆಂಗಳೂರು ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
3. ಎಲ್ಲಾ ಅಧೀಕ್ಷಕ ಇಂಜಿನೀಯರ್ (ವಿ), ಬೆವಿಕಂ ರವರಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
4. ಎಲ್ಲಾ ನಿಯಂತ್ರಣಾದಿಕಾರಿಗಳು, ಬೆವಿಕಂ ರವರಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
5. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿ, ಬೆವಿಕಂ ರವರಿಗೆ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
6. ಎಲ್ಲಾ ಲೆಕ್ಕಾಧಿಕಾರಿಗಳು, ಬೆವಿಕಂ, ಕಾ & ಪಾ ವಿಭಾಗ ರವರಿಗೆ ಸೂಕ್ತ ಕ್ರಮಕ್ಕಾಗಿ.